ಬಟ್ಟಲನ್ನೇ ಕೊಂಡುಕೊಳ್ಳಲು ಬಯಸಿದ್ದರು. ಈ ಘಟನೆ ನಡೆದು ದಶಕಗಳು ಕಳೆದಿವೆ. ಆದರೆ ಇವತ್ತಿನವರೆಗೂ ನೀತಾ ಅವರ ಸಸ್ನೇಹದ ಆ ಸಂತಸದ ಬಟ್ಟಲನ್ನು ಭಾವೇಶ್ ಜೋಪಾನವಾಗಿ ಕಾದಿರಿಸಿದ್ದಾರೆ. ಆ ದಿನದ ಸಿಹಿ ನೆನಪುಗಳು ಆ ಬಟ್ಟಲಲ್ಲಿ ಇಂದಿಗೂ ತುಂಬಿ ತುಳುಕಿವೆ.

ಆ ದಿನಗಳಲ್ಲಿ ಪ್ರವಾಸಿಗಳ ಆಗಮನ ಜೋರಾಗಿತ್ತು. ಇದೀಗ ಪ್ರತಿದಿನ ಸಂಜೆ ಮೋಂಬತ್ತಿ ಮಾರಲು ಭಾವೇಶ್ ಅವರಿಗೆ ಪ್ರೀತಿಯ ಓರ್ವ ಸಹಾಯಕಿ ದೊರೆತಿದ್ದಳು. ನೀತಾ ಸಮಯಕ್ಕೆ ಅದೆಷ್ಟು ಬದ್ಧರಿದ್ದರು ಎಂದರೆ, ಸರಿಯಾಗಿ 5 ಗಂಟೆಗೆ ಅಂಗಡಿ ಹಾಕಲು ಬಂದು ಬಿಡುತ್ತಿದ್ದರು. ಒಂದೆರಡು ದಿನದ ಮಾತಾದರೆ ಸರಿ. ನೀತಾ ಅವರಿಗೆ ಭಾವೇಶ್ ಹೇಳಲು ಬಯಸಿದ್ದರು, 'ನಿಮ್ಮ ರಜೆಯ ಸುಂದರ ಸಂಜೆಗಳನ್ನು ಹೀಗೆ ಕಳೆಯಬೇಡಿ' ಎಂದು. ಆದರೆ ಅವರು ಹೇಳಿದಾಗಲೆಲ್ಲ, ನೀತಾ ಅವರದು ಒಂದೇ ಉತ್ತರ, 'ಭಾವೇಶ್‌ಜಿ, ನನಗೆ ಇಲ್ಲಿಗೆ ಬರುವುದರಿಂದ ಹೆಚ್ಚು ಖುಷಿಯಾಗುತ್ತಿದೆ. ಮಹಾಬಲೇಶ್ವರದ ವೆನ್ನಾ ಸರೋವರದ ತಟದಲ್ಲಿ ಸಂಜೆ ಐಸ್‌ಕ್ರೀಮ್ ತಿನ್ನುವುದಕ್ಕಿಂತಲೂ ಹೆಚ್ಚು ಆನಂದ ನನಗೆ ನಿಮ್ಮ ಮೇಣದಲ್ಲಿ ಮಾಡಿರುವ ಐಸ್‌ಕ್ರೀಮ್ ಮಾರಾಟ ಮಾಡುವುದರಲ್ಲಿ ಸಿಗುತ್ತಿದೆ. ಈ ಸಂತಸದಿಂದ ನೀವೇಕೆ ನನ್ನನ್ನು ವಂಚಿಸಲು ಇಚ್ಛಿಸುತ್ತಿದ್ದೀರಿ?'

ಈ ಮಾತಿಗೆ ಏನು ಹೇಳಲೂ ತೋಚದ ಭಾವೇಶ್ ಅವರು ಮೌನಕ್ಕೆ ಶರಣಾಗಿದ್ದರು. ಗ್ರಾಹಕರು ಇಲ್ಲದ ಸಮಯದಲ್ಲಿ ಅದೂ ಇದೂ ವಿಷಯಗಳನ್ನು ಭಾವೇಶ್ ಅವರಿಗೆ ನೀತಾ ಹೇಳುತ್ತಿದ್ದರು. ತನ್ನ ಶಾಲೆ ಕಾಲೇಜಿನ ಬಗ್ಗೆ ಹೇಳಿದರು. ತಮ್ಮ ಮನೆ ಪರಿವಾರದ ಬಗ್ಗೆ, ಕುಟುಂಬದಲ್ಲಿಯ ಸದಸ್ಯರ ಬಗ್ಗೆ, ತಮ್ಮ ಹವ್ಯಾಸಗಳು, ಜೀವನದ ಲಕ್ಷ್ಯ ಗುರಿಗಳನ್ನು ಕುರಿತು ಹೇಳತೊಡಗುತ್ತಿದ್ದರು. ಒಂದು ಶ್ರೀಮಂತ ಪರಿವಾರದ ಏಕಮಾತ್ರ ಉತ್ತರಾಧಿಕಾರಿ ಆಕೆ ಆಗಿದ್ದರು. ಮಾತನಾಡುತ್ತಾ ಆಡುತ್ತಾ ಭಾವೇಶ್ ಅವರ ಜೀವನದ ಬಗ್ಗೆಯೂ ಬಹಳಷ್ಟು ಕೇಳಿದ್ದರು. ಅನೇಕ ಬಾರಿ ಸಂಜೆ ಆಕೆಯ ಪರಿವಾರದ ಉಳಿದ ಸದಸ್ಯರೂ, ಇವರ ಅಂಗಡಿ ಸಂಭಾಳಿಸಲು ನಿಂತುಬಿಡುತ್ತಿದ್ದರು. ಆಕೆಯ ಚಿಕ್ಕಪ್ಪನ ಮಕ್ಕಳಂತೂ, ಮಾರ್ಕೆಟಿಂಗ್‌ನ ಹೊಸದೇ ತಂತ್ರವನ್ನು ಕಂಡುಹಿಡಿದಂತಿತ್ತು. ಅವರುಗಳು ಸ್ಟಾಲ್‌ಗೆ ಬಂದಾಗ, ಇತರ ಗ್ರಾಹಕರನ್ನು ಅಲ್ಲಿ ನೋಡಿದ ತಕ್ಷಣ, ಮೋಂಬತ್ತಿಗಳ ಪ್ರಶಂಸೆ ಆರಂಭಿಸಿಬಿಡುತ್ತಿದ್ದರು. ಕೆಲವೊಮ್ಮೆಯಂತೂ 'ಅರೆ, ನಾವು ಪುಣೆ, ಮುಂಬಯಿಯ ದೊಡ್ಡ ದೊಡ್ಡ ಅಂಗಡಿಗಳಲ್ಲಿ, ಮಾಲ್‌ಗಳಲ್ಲಿ ಕೂಡಾ ಇಂತಹ ಮೋಂಬತ್ತಿಗಳನ್ನು ಕಾಣಲಿಲ್ಲ' ಎಂದು ಬಿಡುವರು. ಇವರ ಮೆಚ್ಚುಗೆಯ ಮಾತುಗಳು, ಎದುರಿಗೆ ನಿಂತ ಗ್ರಾಹಕರಿಗೆ ಮೋಂಬತ್ತಿ ಕೊಳ್ಳುವಂತೆ ಪ್ರೇರೇಪಿಸುತ್ತಿದ್ದವು. ಭಾವೇಶ್ ಅವರ ಮೋಂಬತ್ತಿಗಳು ನಿಜಕ್ಕೂ ಉತ್ತಮ ಗುಣಮಟ್ಟದ್ದಾಗಿದ್ದು, ಈ ಪ್ರಶಂಸೆಯ ಮಾತುಗಳು ಉತ್ಪ್ರೇಕ್ಷೆ ಆಗಿರಲಿಲ್ಲ. ಭಾವೇಶ್ ಗುಣಮಟ್ಟದ ಬಗ್ಗೆ ಎಲ್ಲಿಲ್ಲದ ಗಮನಹರಿಸುತ್ತಿದ್ದರು. ತಾವು ತಯಾರಿಸಿದ ಮೋಂಬತ್ತಿಗಳು 'ತಮ್ಮ ಸೌಂದರ್ಯ ಮತ್ತು ಗುಣಮಟ್ಟದ ಕಾರಣಕ್ಕೆ ಮಾರಾಟವಾಗಬೇಕು. ಓರ್ವ ಅಂಧ ವ್ಯಕ್ತಿ ಮಾಡಿದ ಮೋಂಬತ್ತಿಗಳು ಎಂಬ ಅನುಕಂಪದ ಕಾರಣಕ್ಕಲ್ಲ' ಎನ್ನುವತ್ತ ಅವರ ಸತತ ಪ್ರಯತ್ನವಿತ್ತು.

ಇಂತೆಲ್ಲ ಮೋಂಬತ್ತಿಯ ಮಾರಾಟದ ನಡುವೆ, ಮಹಾಬಲೇಶ್ವರದ ಬಜಾರಿನ ಬೀದಿ ಬದಿಯ ಕೈಗಾಡಿಯ ಜೊತೆಯಲ್ಲಿ ಕಳೆಯುತ್ತಿದ್ದ ಈ ಸುಂದರ ಸಂಜೆಗಳು, ನೀತಾ ಮತ್ತು ಭಾವೇಶ್ ಅವರನ್ನು ಮೆಲ್ಲನೆ ಹತ್ತಿರಕ್ಕೆ ಸೆಳೆದಿದ್ದವು. ಈ ಎರಡು ಎಳೆಯ ಹೃದಯಗಳ ನಡುವೆ, ಅವರಿಗೆ ಅರಿವಿಲ್ಲದೆಯೇ ಒಂದು ಆತ್ಮೀಯ ಎಳೆ ಹೆಣೆದುಕೊಳ್ಳುತ್ತಿತ್ತು.

ನೀತಾ ಸ್ಟಾಲ್‌ಗೆ ಬರತೊಡಗಿ ಸುಮಾರು 17 18 ದಿನಗಳಾಗಿದ್ದವು. ಆ ದಿನ ಸಂಜೆ, ಅಂಗಡಿಯಲ್ಲಿ ಯಾರೂ ಗ್ರಾಹಕರು ಇಲ್ಲದ ಹೊತ್ತಿನಲ್ಲಿ, ಏಕಾಏಕಿ ನೀತಾ ಹೇಳಿದರು, 'ಮಿಸ್ಟರ್ ಭಾಟಿಯಾ, ನಿಮ್ಮೊಂದಿಗೆ ಒಂದು ಮಾತು ಹೇಳುವುದಿತ್ತು.'

ಭಾವೇಶ್ 'ಜೀ ಮೇಡಂ, ಹೇಳಿ' ಎಂದರು.

'ನೋಡಿ, ನಾನು ಹೇಳುವ ಮಾತು ನಿಮಗೆ ಹಿಡಿಸದೆ ಇದ್ದರೆ, ಕೋಪ ಮಾಡಿಕೊಳ್ಳ ಬೇಡಿ' ಎಂದು ನೀತಾ ಪೀಠಿಕೆ ಹಾಕಿದರು.

ಭಾವೇಶ್ ಹೇಳಿದರು, 'ದಯವಿಟ್ಟು ಹೇಳಿ. ನೀವು ಏನು ಹೇಳಬೇಕೆಂದು ಬಯಸಿದ್ದೀರಿ, ನಿಸ್ಸಂಕೋಚವಾಗಿ ಹೇಳಿ'. ಅವರಿಗೆ ಅನಿಸಿತು, ಬಹುಶಃ ಆಕೆ ಮುಂಬಯಿಗೆ ಹಿಂತಿರುಗಲಿದ್ದಾಳೆ. ನಾಳೆ ಅಥವಾ ನಾಡಿದ್ದರಿಂದ ಆಕೆಗೆ ಬರಲು ಆಗುವುದಿಲ್ಲ. ಇದನ್ನೇ ಆಕೆ ಹೇಳಲು ಹೊರಟಿದ್ದಾಳೆ ಎಂದು ಭಾವೇಶ್ ಭಾವಿಸಿದರು. ನೀತಾ ಒಂದು ಕ್ಷಣ ಹೇಗೆ ಹೇಳುವುದೆಂಬ ಗೊಂದಲದಲ್ಲಿ ಮೌನವಾಗಿದ್ದರು. ಭಾವೇಶ್ ಮತ್ತೆ ಒತ್ತಾಯಿಸಿ ಆಕೆಗೆ ಹೇಳಿದರು, 'ನೀವು ನಿರಾತಂಕವಾಗಿ ಹೇಳಿ. ನಿಮ್ಮ ಯಾವುದೇ ಮಾತಿನಿಂದ ನನಗೆ ಅಸಮಾಧಾನ ಆಗುವುದಿಲ್ಲ' ಎಂದರು.

'ಮಿಸ್ಟರ್ ಭಾಟಿಯಾ, ಕಳೆದ ಎರಡು ಮೂರು ದಿನಗಳಿಂದ ನಾನು ಹಗಲೂ ರಾತ್ರಿ ಒಂದೇ ವಿಷಯದ ಬಗ್ಗೆ ಯೋಚಿಸುತ್ತಿದ್ದೇನೆ. ನಿಮಗೆ ಇಷ್ಟವಾಗದಿದ್ದರೆ ಇಲ್ಲ ಎಂದು ಬಿಡಿ. ನನಗೇನೂ ಅದರಿಂದ ಕೆಡುಕೆನಿಸುವುದಿಲ್ಲ' ಎಂದರು.

'ಅರೆ ಅದೇನು ಹೇಳುವುದಿದೆ ಹೇಳುತ್ತಿಲ್ಲವಲ್ಲ' ಭಾವೇಶ್ ಅವರ ಚಡಪಡಿಕೆ. ನೀತಾ ದೀರ್ಘ ಉಸಿರು ತೆಗೆದುಕೊಂಡು ಹೇಳಿಯೇ ಬಿಟ್ಟರು, 'ಮಿಸ್ಟರ್ ಭಾಟಿಯಾ, ನಾನೇನೋ ನಿರ್ಧರಿಸಿದ್ದೇನೆ. ಆದರೆ ನಿಮ್ಮ ಅಭಿಪ್ರಾಯ ತಿಳಿಯಬೇಕಿದೆ. ನೀವು ನನ್ನನ್ನು ಮದುವೆ ಆಗುವಿರಾ?'

ನೀತಾ ಅವರ ಮಾತು ಕೇಳಿ ದಿಗ್ಭ್ರಮೆಯಿಂದ ಶಿಲೆಯಂತೆ ಕ್ಷಣ ಕಾಲ ಸ್ತಬ್ಧರಾಗಿ ಭಾವೇಶ್ ನಿಂತುಬಿಟ್ಟರು. ಕಿವಿಗೆ ಬಿದ್ದ ಮಾತುಗಳ ಆಘಾತಕ್ಕೆ ತತ್ತರಿಸಿ ಭಾವೇಶ್ ಹಿಂದಕ್ಕೆ ಬೀಳುವುದೊಂದು ಬಾಕಿ ಇತ್ತು. ನೀತಾ ಅವರ ಮಾತುಗಳು ಅವರ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದವು. ಸ್ವಲ್ಪ ಮೆದುಳು ಸಾವರಿಸಿಕೊಂಡಾಗ, ಜೋರಾಗಿ ನಕ್ಕುಬಿಡುವ ಅನಿಸಿತ್ತು.

ಇದೆಂತಹ ಹುಚ್ಚು ಮಾತು. ಮುಂಬಯಿಯ ಅವರು ಎಲ್ಲಿ, ಮಹಾಬಲೇಶ್ವರದ ಬಡ ಬಡಾವಣೆಯ ತಾನಾದರೂ ಎಲ್ಲಿ. ತಮ್ಮ ನಡುವೆ ತಾಳಮೇಳವೆಲ್ಲಿ? ತಾನೊಬ್ಬ ಬೀದಿ ಬದಿಯಲ್ಲಿ ಬಾಡಿಗೆ ಕೈಗಾಡಿಯಲ್ಲಿ ನಿಂತ ಅತಿಸಣ್ಣ ವ್ಯಾಪಾರಿ. ಅದರಲ್ಲೂ ಕಣ್ಣು ಕಾಣದ ಕುರುಡ. ಯಾವುದೇ ಭವಿಷ್ಯದ ಖಾತರಿ ಇಲ್ಲದೆ, ನಡು ಬಜಾರಿನಲ್ಲಿ ನಿಂತ ಅತಿ ಸಾಧಾರಣ ಅಂಧ ವ್ಯಕ್ತಿ. ಅತ್ತ ನೀತಾ, ಒಂದು ಸುಖೀ ಮತ್ತು ಶ್ರೀಮಂತ ಕುಟುಂಬದ ಏಕೈಕ ಸಂತಾನ. ಆಕೆಯ ಮನೆಯಲ್ಲಿ ನೀರು ಕೇಳಿದರೆ, ಹಾಲು ಎದುರಿಗೆ ಬರುತ್ತದೆ. ನೀತಾ ಹೀಗೇಕೆ ಯೋಚಿಸುತ್ತಿದ್ದಾರೆ? ನೀತಾ ತಮಾಷೆ ಮಾಡುತ್ತಿರುವರೆ? ಅರೆಕ್ಷಣದಲ್ಲಿ ಭಾವೇಶ್ ಅವರ ಮನಸ್ಸಿನಲ್ಲಿ ನೂರು ಯೋಚನೆಗಳು ಮಿಂಚಿದ್ದವು.

ಭಾವೇಶ್ ಸುಂದರ ಯುವಕ. ಅವರೊಡನೆ ಅರ್ಧ ಗಂಟೆ ಮಾತನಾಡಿದರೂ ಮನಸ್ಸು ಮುದವಾಗುವ ಗುಣಸ್ವಭಾವ. ಸವಿಯಾದ ಮಾತು ಅವರದು. ಆದರೆ ಅವರು ಅಂಧರು. ಅಂಗವಿಕಲರತ್ತ ಸಮಾಜದ ಧೋರಣೆಗಳು ಅವರನ್ನು ಹಣ್ಣಾಗಿಸಿತ್ತು. ಅದಲ್ಲದೆ ಆ ದಿನಗಳಲ್ಲಿ ಈ ಎಳೆಯ ಯುವತಿಯಲ್ಲಿ ಭಾವೇಶ್ ಅವರಿಗೆ ಒಂದಿಷ್ಟು ಮಗುತನ ಕಂಡಿತ್ತು. ಅವರ ಮಾತುಗಳು ಬಾಲಿಶ ಅನಿಸಿತ್ತು. ಭಾವೇಶ್ ಅವರೂ ಚಿಕ್ಕ ವಯಸ್ಸಿನವರೇ. ಆದರೆ ಬದುಕಿನ ಅಗ್ನಿಪರೀಕ್ಷೆಗಳಲ್ಲಿ ಗಟ್ಟಿಯಾದವರು, ವಯಸ್ಸಿಗೆ ಮೀರಿ ಪ್ರಬುದ್ಧರಾದವರು. ಜೀವನದ ಸಂಘರ್ಷಗಳು ಅವರನ್ನು ಬಲು ಬೇಗನೆ ಬೆಳೆಸಿಬಿಟ್ಟಿದ್ದವು. ನೀತಾ ಅವರ ಮಾತುಗಳಿಂದ ತಟಸ್ಥವಾಗಿತ್ತು ಅವರ ಮನಸ್ಸು ಮತ್ತು ಮಸ್ತಕ. ಆ ಆಘಾತದಿಂದ ಸುಧಾರಿಸಿಕೊಂಡು ಎಚ್ಚೆತ್ತು ಮಾತನಾಡಲು ಅವರಿಗೆ ಕೆಲವು ನಿಮಿಷಗಳೇ ಬೇಕಾಯಿತು.

ದೀರ್ಘವಾಗಿ ಉಸಿರೆಳೆದು ಭಾವೇಶ್ ನಿಧಾನ ವಾಗಿ ಹೇಳಿದರು. 'ನೋಡಿ ನೀತಾಜೀ, ಬಹಳ ಬಾರಿ ಜನರಿಗೆ ಅಂಧರು ಅಂಗವಿಕಲರ ಬಗ್ಗೆ ಅನುಕಂಪ ಸಹಾನುಭೂತಿ ಮೂಡಿಬಿಡುತ್ತದೆ. ನಾವು ಮನೆಯಲ್ಲಿ ಬೆಕ್ಕು ನಾಯಿ ಸಾಕಿದರೆ, ಕೆಲ ದಿನಗಳಲ್ಲಿ ಅವುಗಳನ್ನೂ ಹಚ್ಚಿಕೊಂಡು ಬಿಡುತ್ತೇವೆ. ಬಲು ಬೇಗ ನಿಮಗೆ ನಿಮ್ಮ ಯೋಚನೆಯ ಬಗ್ಗೆಯೇ ಸೋಜಿಗವೆನಿಸುತ್ತದೆ, ಕೆಲವೇ ದಿನಗಳಲ್ಲಿ ಅರೆ ನಾನೆಂಥಾ ಯೋಚನೆ ಮಾಡಿಬಿಟ್ಟಿದ್ದೆ ಎಂದು ಪಶ್ಚಾತ್ತಾಪ ಕೂಡ ಆಗಿಬಿಡುತ್ತದೆ. ಆಗ ನೀವು ಈ ಅಂಧಕಾರದಿಂದ ದೂರ ಓಡಲು ಯತ್ನಿಸುವಿರಿ. ಕಾರಣ, ನನ್ನ ಬಳಿ ನಿಮಗೆ ಕೊಡಲು ನನ್ನನ್ನು ಆವರಿಸಿರುವ ಈ ಅಂಧಕಾರವನ್ನು ಬಿಟ್ಟರೆ ಬೇರೇನೂ ಇಲ್ಲ' ಎಂದರು. ನೀತಾ ಅವರ ಮದುವೆಯ ಈ ಪ್ರಸ್ತಾಪವನ್ನು ಭಾವೇಶ್ ಅವರು 'ಬಚಪನಾ' ಎಂದೇ ತಿಳಿದಿದ್ದರು. ಹಿಂದೆ ಮುಂದೆ ಯೋಚಿಸದೆ ಏನೋ ಹೇಳಿ ಬಿಡುವ ಮಕ್ಕಳ ರೀತಿ ಎಂದು ಭಾವಿಸಿದ್ದರು. ಆದರೆ ನೀತಾ ದೃಢವಾಗಿ ಮತ್ತೆ ಹೇಳತೊಡಗಿದಾಗ ಈಕೆ ಎಲ್ಲ ಪಂಡಿತರನ್ನೂ ವಿದ್ವಾಂಸರನ್ನೂ ಹಿಂದಕ್ಕೆ ಹಾಕಬಲ್ಲಳು ಎಂದು ಭಾವೇಶ್ ಅವರಿಗೆ ಮೆಲ್ಲನೆ ಅರಿವಾಯಿತು.

(ಸಶೇಷ)